ದಿನಾಂಕಃ **18.08.2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ. ಎಸ್. ವಕೀಲರಿಂದ ಃ**

01. ನಾನು ಪಿ.ಯು.ಸಿ. ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಪ್ರಸ್ತುತ ದಾವೆಯ ದಾವಾ ಸ್ವತ್ತಿನ ಸರ್ವೇ ನಂ-6 ಆಗಿರುತ್ತದೆ. ಸರ್ವೇ ನಂ-6 ರಲ್ಲಿ ಸೌಮ್ಯ, ಸರಿತ ಮತ್ತು ರಮ್ಯರವರಿಗೆ ಸೇರಿದ ಜಮೀನುಗಳು ಇವೆ. ಸದರಿ ಸ್ವತ್ತು ನನ್ನ ಹೆಸರಿಗೆ ನನ್ನ ಮಾವನಿಂದ ಹಕ್ಕು ಬದಲಾವಣೆ ಮಾಡುವ ಮೂಲಕ ಬಂದಿರುತ್ತದೆ. ನಾನು ಹಾಜರು ಮಾಡಿರುವ ನಿಪಿ-3 ರ ಕ್ರಯಪತ್ರದ ಅನುಸೂಚಿ ಸ್ವತ್ತಿನ ದಕ್ಷಿಣಕ್ಕೆ ಸುನಂದರವರ ಜಮೀನು ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ದಾವಾ ಸ್ವತ್ತಿನ ಚೆಕ್ಕುಬಂದಿಯ ದಕ್ಷಿಣಕ್ಕೆ ರಸ್ತೆ ಎಂದು ತೋರಿಸಿದ್ದು, ಅದು ತಪ್ಪಾಗಿ ಇರುತ್ತದೆ, ನಮ್ಮ ಕ್ರಯ ಪತ್ರದಂತೆ ದಾವಾ ಸ್ವತ್ತಿನ ದಕ್ಷಿಣಕ್ಕೆ ರಸ್ತೆ ಇರುವುದಿಲ್ಲ, ಸುನಂದರವರಿಗೆ ಸೇರಿದ ಜಮೀನು ಇದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ದಕ್ಷಿಣಕ್ಕೆ ರಸ್ತೆ ಇರುವುದಿಲ್ಲ, ಸುನಂದರವರಿಗೆ ಸೇರಿದ ಜಮೀನು ಇರುತ್ತದೆ, ಆದ ಕಾರಣ ಕ್ರಯ ಪತ್ರದಲ್ಲಿ ಅದನ್ನೆ ತೋರಿಸಲಾಗಿದೆ ಎಂದರೆ ಸರಿಯಲ್ಲ.

2. ಡಿ.ಡಿ.ಎಲ್.ಆರ್.ರವರ ನ್ಯಾಯಾಲಯದಲ್ಲಿ ದಾವಾ ಸ್ವತ್ತಿಗೆ ಸಂಬಂದಿಸಿದಂತೆ ಪೋಡು ರದ್ದು ಮಾಡಲು ಅರ್ಜಿ ಸಲ್ಲಿಸಿರುತ್ತೀರಾ ಎಂದರೆ ಸರಿ. ಸಾಕ್ಷಿಯು ಮತ್ತೆ ಮುಂದುವರೆದ ದಾವಾ ಸ್ವತ್ತಿನ ಸರ್ವೇ ನಂಬರ್-8 ಆಗಿರುತ್ತದೆ ತಪ್ಪಾಗಿ ಸರ್ವೇ ನಂ-6 ಎಂದು ಹೇಳಿರುತ್ತೇನೆ ಎಂದು ಸ್ವತಃ ನುಡಿಯುತ್ತಾರೆ. ಸರ್ವೇ ನಂ-8/1 ರಿಂದ 5 ರ ಸ್ವತ್ತು ಯಾರ ಹೆಸರಿನಲ್ಲಿ ಇದೆ ಎಂದು ನಿಖರವಾಗಿ ಹೇಳುತ್ತೀರಾ ಎಂದರೆ ನಿಖರವಾಗಿ ಹೇಳಲು ಆಗುವುದಿಲ್ಲ, ಆದರೆ ಸರ್ವೇ ನಂ-8 ರಲ್ಲಿ ಸೌಮ್ಯರವರಿಗೆ ಸೇರಿದ 2.04 ಗುಂಟೆ, ಸರಿತರವರಿಗೆ ಸೇರಿದ 2.04 ಗುಂಟೆ, ರಮ್ಯರವರಿಗೆ ಸೇರಿದ 2 ಗುಂಟೆ, ರತ್ನಮ್ಮರವರಿಗೆ ಸೇರಿದ 6.08 ಗುಂಟೆ, ಬಸವಲಿಂಗಚಾರಿರವರಿಗೆ ಸೇರಿದ 2 ಗುಂಟೆ ಮತ್ತು ಸುನಂದಮ್ಮರವರ ಹೆಸರಿನಲ್ಲಿ ಎಷ್ಟು ವಿಸ್ತೀರ್ಣದ ಸ್ವತ್ತು ಇದೆ ಎಂದು ನನಗೆ ಗೊತ್ತಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ನಾನು ಹಜರು ಮಾಡಿರುವ ಆರ್.ಟಿ.ಸಿ. ಗಳ ಪ್ರಕಾರ ಸರ್ವೆ ನಂ-8 ರಲ್ಲಿ ಯಾವುದೇ ಖರಾಬು ಇಲ್ಲ

ಎಂದರೆ ಸರಿ.

3. ಸರ್ವೆ ನಂ–8/6 ರಲ್ಲಿನ 6.5 ಗುಂಟೆ ಜಮೀನನ್ನು ನನ್ನ ಮಾವರವರು ಸದರಿ ಸ್ವತ್ತಿನ ಮಾಲೀಕರಾಗಿದ್ದ ಕಾವೇರಮ್ಮ ಮತ್ತು ಅವರ ಮಕ್ಕಳಾದ ಸುನಂದಮ್ಮ, ಇಂದ್ರಮ್ಮ ಮತ್ತು ವಿಜಯಮ್ಮರವರಿಂದ ಖರೀದಿ ಮಾಡಿರುತ್ತಾರೆ. ಡಿ.ಡಿ.ಎಲ್.ಆರ್.ರವರ ನ್ಯಾಯಾಲಯದಲ್ಲಿ ಹೊರಡಿಸಿರುವ ಆದೇಶದ ದೃಢೀಕೃತ ನಕಲನ್ನು ಹಾಜರು ಮಾಡಿರುತ್ತೇನೆ. ಆದೇಶವನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಆದೇಶದಲ್ಲಿ ಡಿ.ಡಿ.ಎಲ್.ಆರ್.ರವರ ನ್ಯಾಯಾಲಯದಲ್ಲಿ ಅದು ಅವರ ವ್ಯಾಪ್ತಿಗೆ ಮೀರಿರುತ್ತದೆ ಎಂದು ಮತ್ತು ಸಿವಿಲ್ ನ್ಯಾಯಾಲಯದಲ್ಲಿ ವ್ಯಾಜ್ಯವನ್ನು ಪರಿಹರಿಸಿಕೊಳ್ಳುವಂತೆ ಸೂಚನೆ ನೀಡುವ ಮೂಲಕ ಅರ್ಜಿಯನ್ನು ವಜಾ ಮಾಡಿರುತ್ತಾರೆ. ಸದರಿ ಆದೇಶದಲ್ಲಿ ಸರ್ವೇ ನಂ–8 ರಲ್ಲಿ ಮಾಡಿರುವ ಪೋಡಿ ಸರಿಯಾಗಿರುತ್ತದೆ ಎಂದು ಅಭಿಪ್ರಾಯ ಪಡುತ್ತ ನಾವು ಹಾಕಿದ್ದ ಅರ್ಜಿಯನ್ನು ವಜಾ ಮಾಡಿರುತ್ತಾರೆ ಎಂದರೆ ಸರಿಯಲ್ಲ.

4. ಸರ್ವೇ ನಂ–8 ರಲ್ಲಿ ಸುನಂದಮ್ಮರವರಿಗೆ ಸೇರಿದ ಸ್ವತ್ತನ್ನು ಭೂ ಪರಿವರ್ತನೆ ಮಾಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯನ್ನು ಸುನಂದಮ್ಮ, ಡಿ.ಸಿ. ಮತ್ತು ತಹಶೀಲ್ದಾರ್ ರವರ ವಿರುದ್ಧ ದಾಖಲು ಮಾಡಿರುತ್ತೇನೆ. ನಮಗೆ ರಸ್ತೆ ಬೇಕಾಗಿರುವ ಕಾರಣ ಡಿ.ಸಿ. ರವರನ್ನು ಸಹ ಪಕ್ಷಕಾರರನ್ನಾಗಿ ಮಾಡಿರುತ್ತೇನೆ.

**ಈ ಹಂತದಲ್ಲಿ ವಕೀಲರ ಕೋರಿಕೆ ಮೇರೆಗೆ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಹೇ. ಕೇ. ಸ. ಇದೆ.**

**ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ಸಾಕ್ಷಿದಾರರ ಸಹಿ.** **ಪಾಂಡವಪುರ.**